~ಮುಂಜಾನೆ ಮಾತು ~
ಕನಸುಗಳನ್ನು
ಕಣ್ಣೀರ ಜತೆಗೆ ಜಾರಿ
ಹೋಗದಂತೆ ತಡೆದು
ಹೃದಯಕ್ಕಿಳಿಸಿಕೊಂಡು
ನನಸುಗಳಾಗುವಂತೆ
ಪರಿವರ್ತಿಸಿಕೊಳ್ಳೋಣ.

# ವಿಜಯವಾಣಿ

ಕನ್ನಡಿಗರ ಧ್ವನಿ

ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI • MANGALURU ಮಂಗಳೂರು • ಸಂಪುಟ 6 • ಸಂಚಿಕೆ 240

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 29 ನವೆಂಬರ್ 2017 | ಬುಧವಾರ

CENTRAL LIBRARY

# ತ್ರಿಷಾ ಕಾಲೇಜು ಪ್ರಥಮ ಸ್ಥಾನ

## ರಾಜ್ಯ ಮಟ್ಟದ ವಿಜ್ಞಾನ ಪ್ರತಿಭಾನ್ವೇಷಣೆ ಸ್ಪರ್ಧೆ



**ಮಂಗಳೂರಿನ ಸಹ್ಯಾದ್ರಿ ತಾಂತ್ರಿಕ ಮಹಾವಿದ್ಯಾಲಯ ನಡೆಸಿದ ರಾಜ್ಯ ಮಟ್ಟದ ವಿಜ್ಞಾನ ಪ್ರತಿಭಾನ್ವೇಷಣೆ ಸ್ಪರ್ಧೆಯಲ್ಲಿ ಕಲ್ಯಾಣಪುರ ತ್ರಿಷಾ ಕಾಲೇಜು ಪ್ರಥಮ ಸ್ಥಾನ ಪಡೆದುಕೊಂಡಿತು.**

■ ವಿಜಯವಾಣಿ ಸುದ್ದಿಜಾಲ ಉಡುಪಿ

ಮಂಗಳೂರಿನ ಸಹ್ಯಾದ್ರಿ ತಾಂತ್ರಿಕ ಮಹಾವಿದ್ಯಾಲಯ ಇತ್ತೀಚೆಗೆ ನಡೆಸಿದ ರಾಜ್ಯ ಮಟ್ಟದ ವಿಜ್ಞಾನ ಪ್ರತಿಭಾನ್ವೇಷಣೆ ಸ್ಪರ್ಧೆಯಲ್ಲಿ ಕಲ್ಯಾಣಪುರ ತ್ರಿಷಾ ಕಾಲೇಜು ಪ್ರಥಮ ಸ್ಥಾನ ಪಡೆದುಕೊಂಡಿದೆ.

» **ಗೃಹ ರಕ್ಷಣೆ ಥೀಮ್‌ನ ಮಾದರಿ ಪ್ರದರ್ಶನ**

» **ಮರುಭೂಮಿಯಲ್ಲಿ ವಿದ್ಯುತ್ ಉತ್ಪಾದನೆ ಪ್ರಾಜೆಕ್ಟ್**

ಸ್ಪರ್ಧೆಯಲ್ಲಿ ಗೃಹ ರಕ್ಷಣೆ ಥೀಮ್‌ನ ಮಾದರಿ ಪ್ರದರ್ಶಿಸಿ ಪ್ರಥಮ ಸ್ಥಾನ ಪಡೆದಿರುವ ತಂಡ, ಮೊಬೈಲ್ ಫೋನಿನ ಜಿಎಸ್‌ಎಂ ಹಾಗೂ ಸೆನ್ಸಾರ್ ಬಳಸಿ ಮನೆಯಲ್ಲಿ ಗ್ಯಾಸ್ ಸೋರಿಕೆಯಾದಾಗ ಸಂಬಂಧಪಟ್ಟವರಿಗೆ ಮಾಹಿತಿ ರವಾನೆ ಮಾಡುವ ತಂತ್ರಜ್ಞಾನ ಮತ್ತು ಅಗ್ನಿ ಆಕಸ್ಮಿಕವಾದಾಗ ಅಗ್ನಿಶಾಮಕ ದಳಕ್ಕೆ ಮತ್ತು ಸಂಬಂಧಪಟ್ಟವರಿಗೆ ಮಾಹಿತಿ ರವಾನೆ ಮಾಡಿ ಮನೆಗೆ ನೀರು ಸಿಂಪಡಿಸುವ ಕಾರ್ಯ ವನ್ನು ಈ ತಂತ್ರಜ್ಞಾನದಲ್ಲಿ ಅಳವಡಿಸಲಾಗಿದೆ. ತಂಡದಲ್ಲಿ ಸಾತ್ವಿಕ್ ಜಾದವ್, ಸೂರಜ್, ದರ್ಶನ್ ಎಂ ಮತ್ತು ಮನೋಜ್ ಕೆ.ಸಿ ಪಾಲ್ಗೊಂಡಿದ್ದರು.

ಕಾಲೇಜಿನ ಇನ್ನೊಂದು ತಂಡದ ಸದಸ್ಯರಾದ ಡಿಕೋಸ್ಟ ಸೆಲಿನ್ ಸ್ಟೀಫನ್, ಶ್ರದ್ಧಾ ಮತ್ತು ಶ್ವೇತಾ ವಿದ್ಯುತ್ ಕೊರತೆ ಮತ್ತು ನೀರಿನ ಅಭಾವವಿರುವ ಕಾಲದಲ್ಲಿ ಮರುಭೂಮಿಯಲ್ಲಿ ಸೂರ್ಯನ ಬೆಳಕಿನಿಂದ ತಯಾರಿಸಬಹುದಾದ ವಿಜ್ಞಾನ ಮಾದರಿ, ಮರುಭೂಮಿಯಲ್ಲಿ ವಿದ್ಯುತ್ ಉತ್ಪಾದನೆ ಮಾದರಿ ಪ್ರದರ್ಶಿಸಿ ಸಮಾಧಾನಕರ ಬಹುಮಾನ ಪಡೆದುಕೊಂಡಿದ್ದಾರೆ.

ವಿಜ್ಞಾನ ವಿಭಾಗ ಉಪನ್ಯಾಸಕಿ ಸ್ಮಿತಾ ಮರಿನಾ ಡಿಸೋಜ, ಅನುಷಾ ಮಾರ್ಗದರ್ಶನದಲ್ಲಿ ಎರಡೂ ಮಾದರಿಗಳು ಪ್ರದರ್ಶಿಸಲ್ಪಟ್ಟಿತು. ತ್ರಿಷಾ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಪ್ರಭಾಕರ ಭಂಡಾರಿ, ಕಾರ್ಯದರ್ಶಿ ಸರಿತಾ ಪಿ.ಭಂಡಾರಿ, ಪದವಿ ವಿಭಾಗ ಪ್ರಾಂಶುಪಾಲ ಸತೀಶ್ ನಾಗದ್ದೆ ಮತ್ತು ಪದವಿಪೂರ್ವ ವಿಭಾಗ ಪ್ರಾಂಶುಪಾಲೆ ನಿರ್ಮಲಾ ರಾವ್ ಸಹಕರಿಸಿದ್ದರು.

~ಮುಂಜಾನೆ ಮಾತು~
ಕನಸುಗಳನ್ನು
ಕಣ್ಣೀರ ಜತೆಗೆ ಜಾರಿ
ಹೋಗದಂತೆ ತಡೆದು
ಹೃದಯಕ್ಕಿಳಿಸಿಕೊಂಡು
ನನಸುಗಳಾಗುವಂತೆ
ಪರಿವರ್ತಿಸಿಕೊಳ್ಳೋಣ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1 ಕನ್ನಡ ದಿನಪತ್ರಿಕೆ



Sahyadri College of Engineering & Management, Adyar, Mangalore
CENTRAL LIBRARY

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI • MANGALURU | ಮಂಗಳೂರು • ಸಂಪುಟ 6 • ಸಂಚಿಕೆ 240
vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 29 ನವೆಂಬರ್ 2017 | ಬುಧವಾರ

# ವೃತ್ತಿಪರ ಕೋರ್ಸ್ ಸೀಟು ಶೇ.50 ಖಾಲಿ

■ ದೇವರಾಜ ಎಲ್. ಬೆಂಗಳೂರು

**ವೃತ್ತಿಪರ ಸ್ನಾತಕೋತ್ತರ ಕೋರ್ಸ್‌ಗಳನ್ನು ಕೇಳುವವರೇ ಇಲ್ಲದಂತಾಗಿದೆ. ಇದರ ಪರಿಣಾಮ ಪ್ರತಿ ವರ್ಷ ಸರಾಸರಿ ಶೇ.50 ಸೀಟುಗಳು ಖಾಲಿ ಉಳಿಯುತ್ತಿವೆ!**

» **ಎಂಬಿಎ, ಎಂಸಿಎ, ಎಂಟೆಕ್ ಸೀಟು ಕೇಳುವವರಿಲ್ಲ**

» **3 ವರ್ಷದಲ್ಲಿ ಸರಾಸರಿ ಶೇಕಡಾ 50ಕ್ಕಿಂತ ಹೆಚ್ಚು ಖಾಲಿ**

ಅರ್ಧಕ್ಕೆ ಅರ್ಧ ಸೀಟುಗಳು ಪ್ರತಿ ವರ್ಷ ಉಳಿಕೆಯಾಗುತ್ತಿರುವುದರಿಂದ ವೃತ್ತಿಪರ ಸ್ನಾತಕೋತ್ತರ ಕೋರ್ಸ್‌ಗಳಾದ ಎಂಬಿಎ, ಎಂಸಿಎ, ಎಂ.ಟೆಕ್ ನಡೆಸುತ್ತಿರುವ ಕಾಲೇಜು ಆಡಳಿತ ಮಂಡಳಿಗಳ ಅಳಿವು-ಉಳಿವಿನ ಪ್ರಶ್ನೆ ಕೂಡ ಎದುರಾಗಿದೆ. ಇತ್ತೀಚೆಗೆ ಎರಡು ಬಾರಿ ಕೌನ್ಸೆಲಿಂಗ್ ನಂತರವೂ 2017 ನೇ ಸಾಲಿನಲ್ಲಿ ಎಂಬಿಎ- 12,874 ಸೀಟುಗಳ ಪೈಕಿ 8,995 ಸೀಟು ಮಾತ್ರ ಭರ್ತಿಯಾಗಿದ್ದು 3,879 ಸೀಟುಗಳು ಉಳಿಕೆಯಾಗಿದೆ. ಎಂಸಿಎ 4,528 ಸೀಟುಗಳ ಪೈಕಿ ಭರ್ತಿಯಾಗಿರುವುದು ಕೇವಲ 1,163 ಸೀಟುಗಳು ಮಾತ್ರ. ಎಂಸಿಎ ಲ್ಯಾಟರಲ್ ಎಂಟ್ರಿ 1,533 ಸೀಟಗಳಿಗೆ 420 ಸೀಟು ಉಳಿಕೆಯಾಗಿದೆ. ಎಂ.ಟೆಕ್ 11,522 ಸೀಟುಗಳಿದ್ದು, 6600 ಸೀಟು ಉಳಿಕೆಯಾಗಿವೆ. 2017ನೇ ಸಾಲಿನಲ್ಲಿ ಒಟ್ಟಾರೆ 30, 547ಸೀಟುಗಳ ಪೈಕಿ 14,264 ಸೀಟುಗಳು ಖಾಲಿ ಉಳಿದಿವೆ. ಇದು ಕೇವಲ ಒಂದು ವರ್ಷದ ಪರಿಸ್ಥಿತಿಯಲ್ಲ 2015ರಿಂದ 17ರವರೆಗೆ ಕಳೆದ ಮೂರು ವರ್ಷದಲ್ಲೂ ಸರಾಸರಿ ಶೇ.50ಕ್ಕಿಂತ ಹೆಚ್ಚು ಸೀಟುಗಳು ಖಾಲಿ ಉಳಿಯುತ್ತಿವೆ.

**ಎರಡು ವರ್ಷ ಸಾಕು**

**ಮಾಸ್ಟರ್ ಇನ್ ಕಂಪ್ಯೂಟರ್ ಅಪ್ಲಿಕೇಷನ್(ಎಂಸಿಎ) ಕೋರ್ಸ್‌ನ ಅವಧಿ 3 ವರ್ಷಗಳನ್ನು ಎರಡು ವರ್ಷಕ್ಕೆ ಇಳಿಕೆ ಮಾಡುವಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು) ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು(ಎಐಸಿಟಿಯು)ಗೆ ಪತ್ರ ಬರೆದು ಮನವಿ ಮಾಡಲು ನಿರ್ಧರಿಸಿದೆ. ಕಾಲೇಜುಗಳ ಕೋರ್ಸ್‌ನ ಮಾನ್ಯತೆ ರದ್ದುಗೊಳಿಸುವಂತೆ ವಿಟಿಯುಗೆ ಪತ್ರ ಬರೆಯಲಾಗಿತ್ತು ಎಂದು ವಿಟಿಯು ಕುಲಪತಿ ಡಾ.ಕರಿಸಿದ್ದಪ್ಪ ಹೇಳಿದ್ದಾರೆ.**

## ವರ್ಷವಾರು ಸೀಟುಗಳ ಮಾಹಿತಿ

| ಕೋರ್ಸ್ | ಲಭ್ಯವಿದ್ದ ಸೀಟು | ಉಳಿಕೆ ಸೀಟು |
|---|---|---|
| **2015** | | |
| ಎಂಬಿಎ | 12999 | 5323 |
| ಎಂಸಿಎ | 5127 | 3384 |
| ಎಂಸಿಎ (ಎಲ್) | 1626 | 471 |
| ಎಂ.ಟೆಕ್ | 12,772 | 5563 |
| ಒಟ್ಟು | 32,524 | 14741 |
| **2016** | | |
| ಎಂಬಿಎ | 13063 | 5364 |
| ಎಂಸಿಎ | 5073 | 3323 |
| ಎಂಸಿಎ (ಎಲ್) | 1561 | 429 |
| ಎಂ.ಟೆಕ್ | 12,036 | 6906 |
| ಒಟ್ಟು | 31,733 | 16022 |
| **2017** | | |
| ಎಂಬಿಎ | 12874 | 3879 |
| ಎಂಸಿಎ | 4528 | 3365 |
| ಎಂಸಿಎ (ಎಲ್) | 1533 | 420 |
| ಎಂ.ಟೆಕ್ | 11522 | 6600 |
| ಒಟ್ಟು | 30,547 | 14,264 |

*ಎಲ್- ಲ್ಯಾಟರಲ್ ಎಂಟ್ರಿ

THE NEW
INDIAN EXPRESS
MANGALURU • WEDNESDAY • NOVEMBER 29, 2017 • ₹5.00 • PAGES 18 • CITY EDITION

Sahyadri College of Engineering & Management
CENTRAL LIBRARY
Adyar, Mangaluru - 7



## VTU not to accept students' demands

Bengaluru: The Visvesvaraya Technological University (VTU), Belagavi, has decided not to consider the demands of its students who had staged a series of protests across the state. According to members of the executive council, there was pressure from students to introduce supplementary examination option for Choice Based Credit System (CBCS) students. But, the university decided to let the students carry over their backlogs. ENS